# ಹೆಚ್ಚುವರಿ ವ್ಯವಹಾರ ನ್ಯಾಯಾಧೀಶರು ಮತ್ತು ಜೆ.ಎಂ.ಎಫ್.ಸಿ., ಸಾಗರ.

ಸಿ.ಸಿ. ನಂ. 643/2023.

ಫಿರ್ಯಾದಿಃ- ವಿರುದ್ಧ ಆರೋಪಿಃ-

ಗಣೇಶ ತಂದೆ ಕೃಷ್ಣಪ್ಪ,
ವಯಸ್ಸು ಸುಮಾರು 31 ವರ್ಷ,
ಉದ್ಯೋಗಃ ಗಾರೆ ಮೇಸ್ತ್ರಿ ಮತ್ತು ಕೃಷಿಕ,
ವಾಸಃ ಮರತ್ತೂರು ಗ್ರಾಮ ಮತ್ತು ಅಂಚೆ,
ತಾಳಗುಪ್ಪ ಹೋಬಳಿ, ಸಾಗರ ತಾಲ್ಲೂಕು.

ಸುಧಾಕರ ಏ.ಜಿ. ತಂದೆ ಗಣಪತಿ,
ವಯಸ್ಸು ಸುಮಾರು 40 ವರ್ಷ,
ಉದ್ಯೋಗಃ ಪವರ್ ಲೈನ್ ಗುತ್ತಿಗೆದಾರ,
ವಾಸಃ ಆಲಳ್ಳಿ ಗ್ರಾಮ,
ಮರತ್ತೂರು ಅಂಚೆ,
ತಾಳಗುಪ್ಪ ಹೋಬಳಿ,
ಸಾಗರ ತಾಲ್ಲೂಕು.

## ಆಪಾದನೆ

ಆರೋಪಿಯಾದ ನೀವು ಮತ್ತು ಪಿರ್ಯಾದುದಾರರು ಪರಸ್ಪರ ಪರಿಚಯಸ್ಥರಾಗಿದ್ದು, ಆರೋಪಿತನಾದ ನೀವು ನಿಮ್ಮ ಪವರ್ ಲೈನ್ ಗುತ್ತಿಗೆ ವ್ಯವಹಾರದ ಆರ್ಥಿಕ ಅಡಚಣೆ ನಿವಾರಿಸುವ ಸಲುವಾಗಿ ಪಿರ್ಯಾದುದಾರರಿಂದ ರೂ. 2,45,000/- ಗಳ ಕೈಗಡ ಸಾಲವನ್ನು ಪಡೆದು, ಸದರಿ ಹಣವನ್ನು ಎರಡು ತಿಂಗಳ ಒಳಗಾಗಿ ಮರುಪಾವತಿಸುವುದಾಗಿಯು ತಿಳಿಸಿರುತ್ತೀರಿ. ನೀವು, ಅದೇ ದಿನ ನಿಮ್ಮ ಖಾತೆ ಇರುವ ಇಂಡಿಯನ್ ಬ್ಯಾಂಕ್, ಸಾಗರ ಶಾಖೆಗೆ ಸೇರಿದ ಚೆಕ್ ನಂ. 716963 ರ ಮೇಲೆ ರೂ. 2,45,000/- ಹಾಗೂ ದಿನಾಂಕಃ 18.10.2022 ನ್ನು ನಮೂದಿಸಿ, ನಗದಿಕರಿಸಲು ನೀಡಿರುತ್ತೀರಿ.

ನಂತರ, ಪಿರ್ಯಾದಾರರು ಹಣ ನೀಡುವಂತೆ ಕೇಳಿದಾಗ, ನೀವು ನೀಡಿದ ಹಣವನ್ನು ನಗಧಿಕರಿಸಲು ತಿಳಿಸಿರುತ್ತೀರಿ. ನಂತರ, ಫಿರ್ಯಾದುದಾರರು ತಮ್ಮ ಖಾತೆ ಇರುವ ಕೆನರಾ ಬ್ಯಾಂಕ್, ತಾಳಗುಪ್ಪ ಶಾಖೆಗೆ ನೀವು ನೀಡಿದ ಚೆಕ್ಕನ್ನು ದಿನಾಂಕಃ 18.10.2022 ರಂದು ಸಲ್ಲಿಸಿದಾಗ, 'ಫಂಡ್ ಎನ್ ಸಫಿಶಿಯಂಟ್' ಎಂಬ ಹಿಂಬರಹದೊಂದಿಗೆ ದಿನಾಂಕಃ 03.11.2022 ರಂದು ವಾಪಾಸ್ಸು ಬಂದಿರುತ್ತದೆ. ನಿಮ್ಮ ಖಾತೆಯಲ್ಲಿ ಸಾಕಷ್ಟು ಹಣ ಇಲ್ಲ ಎಂಬ ವಿಚಾರ ಪಿರ್ಯಾದಿದಾರರಿಗೆ ತಿಳಿದ ನಂತರ, ದಿನಾಂಕಃ 10.11.2022 ರಂದು ವಕೀಲರ ಮೂಲಕ ಸಾಲ ಮರುಪಾವತಿಸುವಂತೆ ನೋಟಿಸ್ ಕಳುಹಿಸಿದ್ದು, ನಿಮಗೆ ದಿನಾಂಕಃ 21.11.2022 ರಂದು "ಪಾರ್ಟಿ ಅಬೆಸ್ಟ್" ಎಂಬ ಹಿಂಬರಹದೊಂದಿಗೆ ನೋಟಿಸ್ ಜಾರಿಯಾದೇ ವಾಪಾಸ್ಸು ಬಂದಿರುತ್ತದೆ. ಆರೋಪಿಯು ಉದ್ದೇಶಪೂರ್ವಕವಾಗಿ ನೋಟಿಸ್ ನ್ನು ಜಾರಿ ಮಾಡಿಕೊಂಡಿರುವುದಿಲ್ಲ.

This is a True Copy of the Court Records Online. Authenticated @ districts.ecourtsindia.com/cnr/KASM630008572023/truecopy/order-1.pdf

www.ecourtsindia.com

ಫಿರ್ಯಾದುದಾರರು ದಿನಾಂಕಃ 10.11.2022 ರಂದು ಆರೋಪಿಗೆ ನೀಡಿದ ನೋಟಿಸ್ ನಲ್ಲಿ ಗಣಕೀಕೃತ ಕೈತಪ್ಪಿನಿಂದಾಗಿ ಚೆಕ್ ಸಂಖ್ಯೆಃ 716963 ಎನ್ನುವ ಬದಲಾರಿ ಚೆಕ್ ಸಂಖ್ಯೆಃ 71963 ಎಂದು ತಪ್ಪಾಗಿ ನಮುದಾಗಿರುವುದನ್ನು ತಿಳಿದು, ಫಿರ್ಯಾದುದಾರರು ತಮ್ಮ ವಕೀಲರ ಮೂಲಕ ದಿನಾಂಕಃ 12.11.2022 ರಂದು ಕೋರಿಜೆಂಡಂ/ತಿದ್ದುಪಡಿ ನೋಟಿಸ್ ನ್ನು ನೋಂದಣಿ ಅಂಚೆ ಮೂಲಕ ನೋಟಿಸ್ ನೀಡಿದ್ದು, ನೀವು ಉದ್ದೇಶಪೂರ್ವಕವಾಗಿ ಜಾರಿಮಾಡಿಕೊಳ್ಳದೇ "ಪಾರ್ಟಿ ಅಬಾಸ್ಟ್" ಎಂಬ ಹಿಂಬರಹದೊಂದಿಗೆ ದಿನಾಂಕಃ 22.11.2022 ರಂದು ವಾಪಾಸ್ಸು ಬಂದಿರುತ್ತದೆ. ಆದರು, ಸಹಾ ನೀವು ಸಾಲವನ್ನು ಮರುಪಾವತಿಸದೇ, ಫಿರ್ಯಾದುದಾರರಿಗೆ ಮೋಸ, ವಂಚನೆ ಮಾಡಬೇಕೆಂಬ ಉದ್ದೇಶದಿಂದ ಚೆಕ್ಕು ನೀಡಿ, ಆ ಮೂಲಕ ನೀವು, ಎನ್. ಐ. ಆಕ್ಟ್ ಕಲಂ 138 ರಡಿಯಲ್ಲಿ ಅಪರಾಧವೆಸಗಿರುತ್ತೀರಿ ಎಂದು ಈ ಮೂಲಕ ಆಪಾದಿಸಲಾಗಿದ್ದು, ಅದು ಈ ನ್ಯಾಯಾಲಯದ ಸಂಜ್ಞೆಯಲ್ಲಿ ಇದೆ.

(ಆಪಾದನೆಯನ್ನು ದಿನಾಂಕಃ 09.10.2024 ರಂದು ತೆರೆದ ನ್ಯಾಯಾಲಯದಲ್ಲಿ ಮಾಡಲಾಗಿದೆ.)

(ಚಾಂದಿನಿ ಜಿ.ಯು.)
ಹೆಚ್ಚುವರಿ ವ್ಯವಹಾರ ನ್ಯಾಯಾಧೀಶರು
ಮತ್ತು ಜೆ.ಎಂ.ಎಫ್.ಸಿ., ಸಾಗರ.

This is a True Copy of the Court Records Online. Authenticated @ districts.ecourtsindia.com/cnr/KASM630008572023/truecopy/order-1.pdf

www.ecourtsindia.com

www.ecourtsindia.com



ಹೆಚ್ಚುವರಿ ವ್ಯವಹಾರ ನ್ಯಾಯಾಧೀಶರು ಮತ್ತು ಜೆ.ಎಂ.ಎಫ್.ಸಿ., ನ್ಯಾಯಾಲಯದಲ್ಲಿ ಸಾಗರ.

ಸಿ.ಸಿ. ನಂ. 643/2023

ಆರೋಪಿಯ ಹೇಳಿಕೆ

ಆರೋಪಿಯ ಹೆಸರುಃ ಸುಧಾಕರ ಏ.ಜಿ. ತಂದೆ ಗಣಪತಿ.

ಪ್ರಶ್ನೆ. 1. ನಿಮಗೆ ಈ ಪ್ರಕರಣದಲ್ಲಿ ಮಾಡಿರುವ ಆಪಾದನೆ ಅಂಶಗಳನ್ನು ತಿಳಿಯುವ ಭಾಷೆಯಲ್ಲಿ ಓದಿ ವಿವರಿಸಲಾಗಿ ಮನವರಿಕೆಯಾಯಿತೇ?
ಉತ್ತರಃ-

ಪ್ರಶ್ನೆ. 2. ನೀವು ತಪ್ಪನ್ನು ಒಪ್ಪಿಕೊಳ್ಳುವಿರಾ ಅಥವಾ ವಿಚಾರಣೆಯಾಗಬೇಕಾ?
ಉತ್ತರಃ-

(ದಿಃ 09.10.2024 ರಂದು ಆರೋಪಿಯಿಂದ ನೀಡಲ್ಪಟ್ಟಿದೆ ಎಂದು ಪ್ರಮಾಣಿಕರಿಸಿದೆ).

(ಚಾಂದಿನಿ ಜಿ.ಯು.)
ಹೆಚ್ಚುವರಿ ವ್ಯವಹಾರ ನ್ಯಾಯಾಧೀಶರು
ಮತ್ತು ಜೆ.ಎಂ.ಎಫ್.ಸಿ., ಸಾಗರ.

This is a True Copy of the Court Records Online. Authenticated @ districts.ecourtsindia.com/cnr/KASM630008572023/truecopy/order-1.pdf